ಗುಡಿಸಲಿನ ಅಂಗಳದ ಅಂಚಿನಲ್ಲಿದ್ದ ನುಣುಪಾದ ಕರಿಗಲ್ಲಿನ ಮೇಲೆ ಲಕ್ಷ್ಮಣ ಒರಳನ್ನು ಕೊರೆದಿದ್ದ. ಗೋದಾವರಿಯಿಂದ ಮುತ್ತುಗದ ದೊನ್ನೆಯಲ್ಲಿ ನೀರು ಮೊಗೆದು ತಂದು ಗೆಡ್ಡೆಗೆಣಸುಗಳನ್ನು ತೊಳೆಯುತ್ತಿದ್ದುದು ಅದರಲ್ಲಿಯೇ. ಮುತ್ತುಗ ಹೂ ಮುಡಿದಾಗ ಎಲೆ ಸಿಗದೆ ಗುಡಿಸಲ ಸುತ್ತಲಿದ್ದ ಬಾಳೆಗಿಡಗಳಲ್ಲಿ ಹಸುರು ಬಲಿತ ಎಲೆಗಳಿಂದ ದೊನ್ನೆ ಮಾಡಿ ಬಳಸುತ್ತಿದ್ದೆವು. 'ಈ ಪಾಡೇಕೆ? ಪಕ್ಕದಲ್ಲೆ ಹರಿವ ನದಿಯಲ್ಲೇ ತೊಳೆದರಾಗದೆ' ಎಂದರೆ, 'ನೀರು ಕಲುಷಿತವಾಗುವುದು ಅತ್ತಿಗೆ' ಎನ್ನುತ್ತಿದ್ದ. ಹಣ್ಣುಗಳನ್ನು ತಂದಾಗ ಅವನು 'ಕಾಡಿನ ಹಣ್ಣುಗಳನ್ನು ತೊಳೆವ ಅಗತ್ಯವಿಲ್ಲ. ಅವುಗಳಲ್ಲಿ ತೊಳೆದು ತೆಗೆಯುವಂತಹುದು ಏನೂ ಇರದು. ಅದೇ ನಗರಗಳ ಫಾಸಲೆಯಲ್ಲಿ ಬೆಳೆದಿದ್ದಾದರೆ ತೊಳೆಯಬೇಕಾದೀತು. ಆದರೆ ನೇರಳೆ ಹಣ್ಣು ಎಲ್ಲೇ ಬಿಟ್ಟರೂ ತೊಳೆಯಬೇಕು. ಅದರಲ್ಲಿ ಸುಲಭಕ್ಕೆ ಕಾಣಲಾಗದ ಹುಳುಗಳು ಅಡಗಿರುತ್ತವೆ' ಅನ್ನುತ್ತಿದ್ದ.

ಅಂದು ಲಕ್ಷ್ಮಣ ನೇರಳೆ ಹಣ್ಣುಗಳನ್ನು ತಂದಿದ್ದ. ತೊಳೆಯಲು ಒರಳಿನ ನೀರಿನಲ್ಲಿ ನೆನೆಹಾಕಿದ್ದೆ. ಕೆಲವು ಹಣ್ಣುಗಳಿಂದ ಹುಳುಗಳು ಹೊರಬಂದು ತೇಲಾಡುತ್ತಿದ್ದವು. ಅವು ಹೊರ ಹೋಗಲು ಒರಳು ತುಂಬಿ ಕೋಡಿ ಹೋಗುವಂತೆ ನೀರು ಹಾಕಿದೆ. ಬದುಕಿದ್ದ ಹುಳುಗಳೊಂದಿಗೆ ಸತ್ತ ಹುಳುಗಳೂ ಕೊಚ್ಚಿ ಹೋಗುತ್ತಿದ್ದವು. ಚೆನ್ನಾದ ಹಣ್ಣುಗಳನ್ನು ಆರಿಸುತ್ತ ಒರಳಿನಿಂದ ಗೇಣು ದೂರದಲ್ಲಿ ಅಗಲವಾಗಿ ಜೋಡಿಸಿದ್ದ ಮುತ್ತುಗದ ಎಲೆಗಳ ಮೇಲೆ ಹಾಕುತ್ತಿದ್ದೆ. ಹರಿದು ಹೋಗದೆ ಉಳಿದ ಹುಳುಗಳು ಕೈಗೆ ಮೆತ್ತಿಕೊಳ್ಳುತ್ತಿದ್ದವು. ಇಸ್ಸೀಯೆಂದು ದೂರಕ್ಕೆ ಬೀಳುವಂತೆ ಕೈ ಕೊಡವುತ್ತಿದ್ದೆ. ಇದನ್ನು ಗಮನಿಸುತ್ತಿದ್ದ ಲಕ್ಷ್ಮಣ, ಆರಿಸಿಯೇ ತಂದುದು. ಆದರೂ ಹುಳು ಉಳಿದು ಬಿಟ್ಟಿವೆಯೆಂದು ಪೇಚಾಡುತ್ತಿದ್ದ. 'ನೀರಿಗೆ ಬಿದ್ದಾಗಲೇ ತಿಳಿಯುವುದು' ಎಂದೆ. ತಲೆ ತಗ್ಗಿಸಿ ವಲ್ಲಿಯಿಂದ ಬಿಲ್ಲು ಬಾಣಗಳನ್ನು ಒರೆಸುತ್ತಿದ್ದ ರಾಮ, 'ಯಾರು ನೀರಿಗೆ ಬಿದ್ದದ್ದು' ಎಂದು ತಲೆ ಎತ್ತದೆ ಕೇಳಿದ. 'ನೇರಳೆ ಹಣ್ಣಿನಲ್ಲಿದ್ದ ಹುಳುಗಳು' ಎಂದು ಲಕ್ಷ್ಮಣ ಉತ್ತರಿಸಿದ. 'ಬದುಕಿವೆಯೆ, ಸತ್ತವೆ' ಎಂದು ಒರೆಸಿದ ಬಾಣವನ್ನು ತೂಣೀರದಲ್ಲಿಡುತ್ತ ಕೇಳಿದ. 'ಕೆಲವು ಬದುಕಿದ್ದವು, ಕೆಲವು ಸತ್ತಿದ್ದವು. ಇರುವೆಗಳು ಎರಡನ್ನೂ ಮುತ್ತಿಕೊಂಡು ತಿನ್ನುತ್ತಿವೆ' ಎಂದು ಹೇಳಿದೆ. 'ಪಾಪ' ಎಂದು, ಒರೆಸಲು ಇನ್ನೊಂದು ಬಾಣವನ್ನು ಕೈಗೆತ್ತಿಕೊಂಡ.

ರಾಮನೆಂದೂ ಇಂಥ ಕೆಲಸಗಳಿಗೆ ಕೈ ಹಚ್ಚುತ್ತಿರಲಿಲ್ಲ. ಆ ಹೊತ್ತಿನಲ್ಲಿ ಗೋದಾವರಿಯ ಪೂರ್ವ ದಡದಲ್ಲಿದ್ದ ಗಿಡಮರಗಳನ್ನು, ಅವುಗಳಲ್ಲಿ ಕೂತು ಕೂಜನಿಸುವ ಪಕ್ಷಿಗಳನ್ನು, ನೀರಿಗೆ ಬರುವ ಪ್ರಾಣಿಗಳನ್ನು ಗಣತಿ ಮಾಡುತ್ತಿದ್ದ. ಗಿಡಮರಗಳು ಎಣಿಕೆಗೆ ಸಿಕ್ಕಂತೆ ಚಂಚಲದ ಹಕ್ಕಿಗಳು ಸಿಗುತ್ತಿರಲಿಲ್ಲ. ಒಮ್ಮೊಮ್ಮೆ ದಡದಂಚಿಗೆ ಬಂದು ಚುಳುಗುಟ್ಟುವ ಮೀನುಗಳನ್ನು ಎಣಿಸುವುದರಲ್ಲಿ ಮಗ್ನನಾಗುತ್ತಿದ್ದ. ಎಣಿಕೆಯಲ್ಲಿರುವಾಗಲೇ ಅವುಗಳಲ್ಲಿ ಕೆಲವು ಅವನ ಕಣ್ಣನ್ನು ವಂಚಿಸಿ ಮಾಯವಾಗುತ್ತಿದ್ದವು. ಅವನು ಲೆಕ್ಕ ತಪ್ಪುವುದನ್ನು ನೋಡುವುದು ನನಗೆ ವಿನೋದ. ಮೊದಮೊದಲು ಇದು ರಾಮಲೀಲೆ ಅಂದುಕೊಳ್ಳುತ್ತಿದ್ದೆ. ಬರಬರುತ್ತ ಕಂಡುದನ್ನು ಗುರುತಿಟ್ಟುಕೊಳ್ಳುವ ಅಭ್ಯಾಸವೆಂದು ತಿಳಿಯಿತು.

ತೊಳೆದು, ಉದ್ದುದ್ದ ಗೆರೆಯಂತೆ ಗಾಯಮಾಡಿ ಉಪ್ಪುನೀರಿನಲ್ಲಿ ನೆನೆಹಾಕಿದ ನೇರಳೆ ಹಣ್ಣೆಂದರೆ ರಾಮನಿಗೆ ಬಹಳ ಇಷ್ಟ. ಆದರೆ ಪಂಚವಟಿ ಗುಡಿಸಿಲಿನಲ್ಲಿ ಉಪ್ಪು ಇರಲಿಲ್ಲ. ಗುಹನೇನಾದರು ಬಂದರೆ ಉಪ್ಪು ತಂದುಕೊಡುವಂತೆ ಹೇಳಲು ರಾಮನಿಗೆ ಹೇಳಬೇಕು ಅಂದುಕೊಂಡೆ.

ತೇವ ಆರಲು ಎಲೆಯ ಮೇಲೆ ಹರವಿದ ಹಣ್ಣುಗಳನ್ನು ಲಕ್ಷ್ಮಣ ಎಣಿಸಿ, 'ಅರವತ್ತೆರಡು. ನನಗೆ ಇಪ್ಪತ್ತು, ನಿಮ್ಮಿಬ್ಬರಿಗೆ ಇಪ್ಪತ್ತೊಂದು, ಇಪ್ಪತ್ತೊಂದು' ಅಂದ. ಯಾವಾಗಲೂ ತನಗೆ ಕಡಿಮೆ ಮಾಡಿಕೊಳ್ಳುವುದು ಅವನ ಹುಟ್ಟುಗುಣ.

***

ಸ್ವಯಂವರ, ಮದುವೆಯ ಗಡಿಬಿಡಿ ಮುಗಿದು ಹತ್ತಿರದ ಸಂಬಂಧಿ, ನಂಟರೆಲ್ಲ ಊರುಗಳಿಗೆ ಮರಳಿದ್ದರು. ಹಿರಿಯರು ಅಯೋಧ್ಯೆ ಪಯಣದ ಮಾತಿನಲ್ಲಿದ್ದರು. ರಾಮನ ಪಕ್ಕ ಕುಳಿತಿದ್ದ ಲಕ್ಷ್ಮಣ ತಮ್ಮಂದಿರಿಗೆ ಸ್ವಯಂವರಕ್ಕೆ ಬಂದು ಸೋತವರ ಮುಖಭಾವಗಳನ್ನು ಅಭಿನಯಿಸಿ ತೋರುತ್ತಿದ್ದ. ನಾನು, ತಂಗಿಯರು ಭರತ ಶತ್ರುಘ್ನರಷ್ಟೇ ಆಸಕ್ತಿಯಿಂದ ಕೇಳುತ್ತಿದ್ದೆವು. ರಾಮ ನಿರ್ಲಿಪ್ತನಾಗಿದ್ದ. ರಾವಣನು ಶಿವಧನುವನ್ನು ಸಮೀಪಿಸಿದ್ದು, ಅದನ್ನೆತ್ತಲು ಮಾಡಿದ ಪ್ರಯತ್ನಗಳು ವಿಫಲವಾಗಿ ಲಜ್ಜೆಪಟ್ಟುದನ್ನು ವಿವರವಾಗಿ ಹೇಳುತ್ತಿದ್ದಾಗ ರಾಮ, ಎರಡು ಮೂರು ಸಲ ಕುಳಿತ ಭಂಗಿ ಬದಲಿಸಿ, ಗಲ್ಲಕ್ಕೆ ಕೈ ಹಚ್ಚಿ ಕುಳಿತಿದ್ದ. ವಿಶ್ವಾಮಿತ್ರರಿಗೆ ನಮಿಸಿ, ಹರಧನುವಿನತ್ತ ಹೆಜ್ಜೆಯಿಡುತ್ತಿದ್ದ ಬಗೆಯನ್ನು ಬಣ್ಣಿಸಲು ಪ್ರಾರಂಭಿಸುತ್ತಿದ್ದಂತೆ, 'ಸೀತಾ, ಇವರು ಮಾತಾಡುತ್ತಿರಲಿ. ನನಗೆ ನೀನು ಬೆಳೆಸಿದ್ದೆಂದು ಹೇಳುವ ತೋಟವನ್ನು ತೋರಿಸು' ಎಂದು ಎದ್ದು ನಿಂತ. ನನಗೆ ಲಕ್ಷ್ಮಣನ ಮಾತುಗಳನ್ನು ಕೇಳಬೇಕೆನಿಸಿತ್ತು. ಆದರೆ ರಾಮ ನಿಂತದ್ದು 'ಬಾ' ಎಂಬ ಸೂಚನೆಯಾಗಿತ್ತು. ದಾರಿ ತೋರಿಸಲು ಅವನ ಮುಂದೆ ನಡೆದೆ.

ನನ್ನ ಹೆಜ್ಜೆಯ ಮೇಲೆ ತನ್ನ ನಿಡಿಪಾದ ಊರುತ್ತ, ನನ್ನ ಕಾಲ್ಗೆಜ್ಜೆಯುಲಿ ಆಲಿಸುತ್ತ ಬರುತ್ತಿದ್ದ. ಅರಮನೆಯ ಕಾವಲು ದಾಟಿದ ಮೇಲೆ ನನ್ನ ಸಮಕ್ಕೆ ಹೆಜ್ಜೆ ಇಡುತ್ತ, 'ನಿನ್ನನ್ನು ಹಿಂಬಾಲಿಸುವುದೊಂದು ಸೊಬಗು. ಪಕ್ಕದಲ್ಲಿ ನಡೆಯುವುದೊಂದು ಆನಂದ'ವೆಂದ. 'ನನಗೆ ಹಿಗ್ಗು' ಎಂದೆ. ಒಮ್ಮೆ ಸುತ್ತಲು ಕಣ್ಣು ಹಾಯಿಸಿ, ನನ್ನ ಹೆಗಲ ಮೇಲೆ ಕೈ ಹಾಕಿ, 'ಏನೇನು ಗಿಡಮರಗಳಿವೆ ನಿನ್ನ ತೋಟದಲ್ಲಿ?' ಎಂದ. 'ಹಲಸು, ಮಾವು, ಬೇಲ,

